## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಬಂಗಾರಪೇಟೆ

**ಸಿಸಿ ಸಂಖ್ಯೆ:29/2021** **ಚಾಸಾ:13** **ಪ್ರಾಸಾ:11**

**ಸಾಕ್ಷಿಯನ್ನು ದಿ:06.03.2025 ರಂದು ಕರೆಸಿ ಪ್ರಮಾಣ ವಚನ ಮೂಡಿಸಲಾಯಿತು**

| | |
|---|---|
| ಹೆಸರು : | ಡಾ.ಅನಿತಾ ಬಡನ್ |
| ಗಂಡನ ಹೆಸರು: | ಭಾನುಚಂದರ್ |
| ವಯಸ್ಸು: | 52 ವರ್ಷ |
| ವೃತ್ತಿ: | ವೈದ್ಯಾಧಿಕಾರಿಗಳು |
| ವಾಸ ಸ್ಥಳ: | ಬಂಗಾರಪೇಟೆ ತಾಲ್ಲೂಕು. |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ಸನ್.2009 ರಿಂದ ಪ್ರಸ್ತುತವಾಗಿ ನಾನು ಬಂಗಾರಪೇಟೆ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ: 20.10.2020 ರಂದು ನಾನು ಸಿ.ಎಂ.ಒ ಕರ್ತವ್ಯ ನಿರ್ವಹಿಸುತ್ತಿರುವಾಗ ಚಾಸಾ.1 ರವರು ಆಸ್ಪತ್ರೆಗೆ ಹಲ್ಲೆಯ ಹಿನ್ನಲೆಯೊಂದಿಗೆ ಭೇಟಿ ನೀಡಿದಾಗ ಚಿಕಿತ್ಸೆ ನೀಡಿ ಪರಿಶೀಲಿಸಿದಾಗ ಅವರಿಗೆ ಈ ಕೆಳಕಂಡಂತೆ ಗಾಯಗಳು ಕಂಡು ಬಂದವು.

1. ತಲೆಯ ಮೇಲೆ 4 **X ½ X 0.1** ಹರಿದ ಗಾಯವಾಗಿರುತ್ತದೆ.

ತದನಂತರ ಸಿ.ಟಿ.ಸ್ಕ್ಯಾನ್ ಮಾಡಿದ ಬಳಿಕ ಸದರಿ ಗಾಯಗಳು ನನ್ನ ಅಭಿಪ್ರಾಯದಲ್ಲಿ ಸಾಮಾನ್ಯ ಸ್ವರೂಪದ ಗಾಯಗಳು ಆಗಿವೆ.

ಅದೇ ದಿನ ಚಾಸಾ.2 ರವರು ಹಲ್ಲೆಯ ಹಿನ್ನಲೆಯೊಂದಿಗೆ ಮಧ್ಯಾಹ್ನ 3.30 ಕ್ಕೆ ಆಸ್ಪತ್ರೆಗೆ ಭೇಟಿ ನೀಡಿದಾಗ ಚಿಕಿತ್ಸೆ ನೀಡಿ ಪರಿಶೀಲಿಸಿದಾಗ ಅವರಿಗೆ ಈ ಕೆಳಕಂಡಂತೆ ಗಾಯಗಳು ಕಂಡು ಬಂದವು.

1. ಹಣೆಯ ಬಲಭಾಗದಲ್ಲಿ ಊತಗಾಯವಾಗಿತ್ತು,
2. ಎದೆಯ ಎಡಭಾಗದಲ್ಲಿ ತರಚಿದ ಗಾಯವಾಗಿತ್ತು.
3. ಕತ್ತಿನ ಬಲಭಾಗದಲ್ಲಿ ತರಚಿದ ಗಾಯವಾಗಿತ್ತು ಮತ್ತು ಮೊಣಕಾಲಿಗೆ ನೋವುಂಟು ಆಗಿರುತ್ತದೆ.

ತದನಂತರ ಸದರಿ ಗಾಯಗಳು ನನ್ನ ಅಭಿಪ್ರಾಯದಲ್ಲಿ ಸಾಮಾನ್ಯ ಸ್ವರೂಪದ ಗಾಯಗಳು ಆಗಿವೆ.

ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿದ್ದು , ಅವುಗಳು ಚಾಸಾ.1 ಮತ್ತು ಚಾಸಾ.2 ರವರ ಗಾಯದ ಪ್ರಮಾಣ ಪತ್ರಗಳಾಗಿದ್ದು , ಅದರಲ್ಲಿರುವ ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು , ಸದರಿ ದಾಖಲೆಗಳನ್ನು ನಿಪಿ.6 ಮತ್ತು ನಿಪಿ.7 ಎಂದು, ಅದರಲ್ಲಿರುವ ಸಾಕ್ಷಿಯು ತನ್ನ ಸಹಿಗಳನ್ನು ನಿಪಿ.6(ಎ) ಮತ್ತು ನಿಪಿ.7(ಎ) ಎಂದು ಗುರುತಿಸಲಾಯಿತು.

ಸದರಿ ಗಾಯಗಳು ದೊಣ್ಣೆಯಿಂದ ಹಲ್ಲೆ ಮಾಡಿದಾಗ ಆಗಬಹುದಾಂತಹ ಗಾಯಗಳು ಆಗುತ್ತವೆಂದು ನುಡಿಯುತ್ತಾರೆ.

**ಪಾಟೀ ಸವಾಲುಃ** ಶ್ರೀ.ಎಂ .ಎ.ಆರ್.ಅರೋಪಿ ಪರ ವಕೀಲರಿಂದಃ

ಚಾಸಾ.2 ರವರಿಗೆ ಪರಿಚಿದ ಗಾಯಗಳು ಕಂಡು ಬಂದಿರುವುದಿಲ್ಲ. ಚಾಸಾ.2 ರವರು ಹೊರರೋಗಿಯಾಗಿ ಚಿಕಿತ್ಸೆ ನೀಡಲಾಗಿದೆ. ಚಾಸಾ.2 ರವರಿಗೆ 10 ನಿಮಿಷ ಚಿಕಿತ್ಸೆ ನೀಡಿರುತ್ತೇನೆ. ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆ ಬಂದಲ್ಲಿ ಪೋಲೀಸರಿಗೆ ಮಾಹಿತಿ ನೀಡುತ್ತೇವೆ ಎಂದರೆ ಸರಿ. ಚಾಸಾ.2 ರವರು ಹಲ್ಲೆಯ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಬಂದಾಗ ನಾವು ಪೋಲೀಸರಿಗೆ ಮಾಹಿತಿ ನೀಡಿದೆವು. ನಿಪಿ.7 ರಲ್ಲಿ ಹೊರರೋಗಿಯ ಸಂಖ್ಯೆಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ.7 ರಲ್ಲಿ ಕಂಡು ಬರುವ ತರಚಿದ ಗಾಯಗಳು ಕೈಗಳಿಂದ ಹಲ್ಲೆ ಮಾಡಿದಾಗ ಆಗುವ ಸಾಧ್ಯತೆಗಳು ಇಲ್ಲ.

ಚಾಸಾ.1 ರವರ ಮುಖದ ಮೇಲೆ ಪರಿಚಿದ ಗಾಯಗಳು ಇರಲಿಲ್ಲ. ಚಾಸಾ.1 ರವರ ಮೇಲೆ ಹೊರರೋಗಿಯಾಗಿ ಚಿಕಿತ್ಸೆ ನೀಡಿದೆವು. ಚಾಸಾ.1 ರವರು ಆಸ್ಪತ್ರೆಗೆ ಬಂದಾಗ ಪ್ರಜ್ಞೆ ತಪ್ಪಿರಲಿಲ್ಲ. ಚಾಸಾ.1 ರವರ ಬಟ್ಟೆಯು ರಕ್ತ ಕಲೆಗಳು ಆದ ಬಗ್ಗೆ ನನಗೆ ನೆನಪಿಲ್ಲ. ಬಂಗಾರಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಸಿ.ಟಿ.ಸ್ಕ್ಯಾನ್ ಗೆ ಅವಕಾಶವಿಲ್ಲ ಎಂದರೆ ಸರಿ . ನಾವು ಲಿಖಿತ ರೂಪದಲ್ಲಿ ಕೋಲಾರದ ಎಸ್ ಎನ್ ಆರ್ ಆಸ್ಪತ್ರೆಗೆ ಸೂಚಿಸಿದೆವು. ಚಿಕಿತ್ಸೆ ನೀಡಿದ ಮರುದಿನ ನಾವು ಸಿ.ಟಿ.ಸ್ಕ್ಯಾನ್‌ನ ವರದಿಯನ್ನು ಪಡೆದುಕೊಂಡೆ.

ದಿಃ 20.10.2020 ರಂದು ಹೊರತುಪಡಿಸಿ ಬೇರೆಯಾವ ದಿನದಂದು ಚಾಸಾ.1 ರವರಿಗೆ ಚಿಕಿತ್ಸೆ ನೀಡಿಲ್ಲ. ಚಾಸಾ.1 ರವರು ನನಗೆ ಸಿ.ಟಿ.ಸ್ಕ್ಯಾನ್‌ನ ವರದಿಯನ್ನು ತಂದು ಕೊಟ್ಟಿರುತ್ತಾರೆ. ತನಿಖಾಧಿಕಾರಿಗಳು ನಿಪಿ.6 ಮತ್ತು ನಿಪಿ.7 ನ್ನು ತೋರಿಸಿ ಅಭಿಪ್ರಾಯ ಪಡೆದಿಲ್ಲ. ನಿಪಿ.6 ಮತ್ತು ನಿಪಿ.7 ರಲ್ಲಿ ಕಂಡು ಬರುವ ಗಾಯಗಳು ಒಬ್ಬ ವ್ಯಕ್ತಿ ಆಯಾತಪ್ಪಿ

ಬಿದ್ದಾಗ ಆಗಬಹುದಾದ ಗಾಯಗಳು ಎಂದರೆ ಸರಿ. ಅರೋಪಿತರು ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಬಳಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.1 ಮತ್ತು ಚಾಸಾ.2 ರವರ ಮಾತನ್ನು ಕೇಳಿ ಸುಳ್ಳು ಪ್ರಮಾಣ ಪತ್ರವನ್ನು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ಬಂಗಾರಪೇಟೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಬಂಗಾರಪೇಟೆ**

**ಸಿಸಿ ಸಂಖ್ಯೆ:2177/2021** **ಚಾಸಾಃ10** **ಪ್ರಾಸಾಃ5**

**ಸಾಕ್ಷಿಯನ್ನು ದಿಃ09.01.2025 ರಂದು ಕರೆಸಿ ಪ್ರಮಾಣ ವಚನ ಮೂಡಿಸಲಾಯಿತು**

| | |
|---|---|
| **ಹೆಸರು ಃ** | ಬಾಬು |
| ತಂದೆಯ **ಹೆಸರುಃ** | ಲೇಟ್ ಷಣ್ಮುಗಂ |
| **ವಯಸ್ಸುಃ** | 48 ವರ್ಷ |
| **ವೃತ್ತಿಃ** | ವ್ಯವಸಾಯ |
| **ವಾಸ ಸ್ಥಳಃ** | ದಾಸರಹೊಸಹಳ್ಳಿ , ಬಂಗಾರಪೇಟೆ ತಾಲ್ಲೂಕು. |

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ನಿಪಿ.8 ನ್ನು ತೋರಿಸಲಾಗಿದ್ದು , ಅದರಲ್ಲಿರುವ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.8(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಯಾವ ವಿಚಾರಕ್ಕೆ ಹಾಕಿದ್ದೇನೆಂದು ನನಗೆ ನೆನಪಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಸ್ಥಳ ಮಹಜರ್ ಮಾಡಿಲ್ಲ ಮತ್ತು ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಎಪಿಪಿ ರವರು ಕೋರಿರುತ್ತಾರೆ. ಅದರಂತೆ ಅನುಮತಿ ನೀಡಿದೆ.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 20.09.2021 ರಂದು ನನ್ನ ಮತ್ತು ಚಾಸಾ.9 ಮತ್ತು 1 ರವರ ಸಮಕ್ಷಮ ಚಾಸಾ.2 ರವರು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 8.00 ರಿಂದ 09.00 ಗಂಟೆಯವರೆಗೂ ಮಹಜರ್ ಕ್ರಮ ಜರುಗಿಸಿ ಒಂದು ಕೆ.ಎಸ್.ಆರ್.ಟಿ.ಸಿ ಮತ್ತು ಒಂದು ಹೋಂಡಾ ಯುನಿಕಾರ್ನ್ ನ ದ್ವಿಚಕ್ರ ವಾಹನವನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಅರೋಪಿಗಳ ಪರ ವಕೀಲರಿಂದಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಬಂಗಾರಪೇಟೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಬಂಗಾರಪೇಟೆ**

**ಸಿಸಿ ಸಂಖ್ಯೆ:2177/2021** **ಚಾಸಾಃ9** **ಪ್ರಾಸಾಃ6**

**ಸಾಕ್ಷಿಯನ್ನು ದಿಃ09.01.2025 ರಂದು ಕರೆಸಿ ಪ್ರಮಾಣ ವಚನ ಮೊಡಿಸಲಾಯಿತು**

| | |
|---|---|
| **ಹೆಸರು ಃ** | ಮಂಜುನಾಥ |
| ತಂದೆಯ **ಹೆಸರುಃ** | ಚಂದ್ರಪ್ಪ |
| **ವಯಸ್ಸುಃ** | 39 ವರ್ಷ |
| **ವೃತ್ತಿಃ** | ಪತ್ರ ಬರಹಗಾರರು |
| **ವಾಸ ಸ್ಥಳಃ** | ಬಂಗಾರಪೇಟೆ ತಾಲ್ಲೂಕು. |

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ನಿಪಿ.8 ನ್ನು ತೋರಿಸಲಾಗಿದ್ದು , ಅದರಲ್ಲಿರುವ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.8(ಡಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಯಾವ ವಿಚಾರಕ್ಕೆ ಹಾಕಿದ್ದೇನೆಂದು ನನಗೆ ನೆನಪಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಸ್ಥಳ ಮಹಜರ್ ಮಾಡಿಲ್ಲ ಮತ್ತು ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಎಪಿಪಿ ರವರು ಕೋರಿರುತ್ತಾರೆ. ಅದರಂತೆ ಅನುಮತಿ ನೀಡಿದೆ.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 20.09.2021 ರಂದು ನನ್ನ ಮತ್ತು ಚಾಸಾ.9 ಮತ್ತು 1 ರವರ ಸಮಕ್ಷಮ ಚಾಸಾ.2 ರವರು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 8.00 ರಿಂದ 09.00 ಗಂಟೆಯವರೆಗೂ ಮಹಜರ್ ಕ್ರಮ ಜರುಗಿಸಿ ಒಂದು ಕೆ.ಎಸ್.ಆರ್.ಟಿ.ಸಿ ಮತ್ತು ಒಂದು ಹೋಂಡಾ ಯುನಿಕಾರ್ನ್ ನ ದ್ವಿಚಕ್ರ ವಾಹನವನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಅರೋಪಿಗಳ ಪರ ವಕೀಲರಿಂದಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ.**